## ಲೆಕ್ಕಪತ್ರ ಸ್ಥಾಯಿ ಸಮಿತಿಯ ವತಿಯಿಂದ ದಿನಾಂಕ:5/1/2011ರಂದು ಬೆಳಿಗ್ಗೆ 9–30ಕ್ಕೆ ಸಹಾಯಕ ಕಂದಾಯ ಅಧಿಕಾರಿ(ಶಾಂತಿನಗರ) ಕಚೇರಿಯನ್ನು ತಪಾಸಣೆ ನಡೆಸಿದ ಬಗ್ಗೆ ವರದಿ:–

**ಹಾಜರಿದ್ದ ಸದಸ್ಯರುಗಳು:–**

| | |
|---|---|
| ಶ್ರೀ.ಗಂಗಭೈರಯ್ಯ | ಅಧ್ಯಕ್ಷರು |
| ಶ್ರೀಮತಿ.ಚೇತನಗೌಡ | ಸದಸ್ಯರು |
| ಶ್ರೀಮತಿ ಶಕುಂತಲ | ಸದಸ್ಯರು |
| ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು |
| ಶ್ರೀ.ಓ.ಮಂಜುನಾಥ್, | ಸದಸ್ಯರು |
| ಶ್ರೀಮತಿ. ಕ್ವೀನ್ ಎಲಿಜಬತ್ | ಸದಸ್ಯರು |
| ಶ್ರೀ.ಸಂಪತ್ ರಾಜ್.ಆರ್. | ಸದಸ್ಯರು |
| ಶ್ರೀ.ನೂರ್ ಜಾನ್ ಷರೀಫ್, | ಸದಸ್ಯರು |
| ಶ್ರೀ.ಹನುಮಂತೇಗೌಡ | ಸದಸ್ಯರು |

1. ಸಹಾಯಕ ಕಂದಾಯ ಆದಿಕಾರಿ(ಶಾಂತಿನಗರ )ಕಚೇರಿಯನ್ನು ಲೆಕ್ಕಪತ್ರ ಸ್ಥಾಯಿ ಸಮಿತಿಯ ವತಿಯಿಂದ ತಪಾಸಣೆ ಮಾಡಲಾಯಿತು, ಸದರಿ ಕಛೇರಿಯಲ್ಲಿ ನಿಯಮಾನುಸಾರ ನಿರ್ವಹಣೆ ಮಾಡಬೇಕಾಗಿದ್ದ ನಗದು ಪುಸ್ತಕವನ್ನು ನಿರ್ವಹಿಸಿಲ್ಲದಿರುವುದು ಕಂಡುಬಂದಿದ್ದು, ಈ ಬಗ್ಗೆ ಸಮಿತಿಯ ಪರಿಚಯ ಸಭೆಯಲ್ಲಿ ಈ ಹಿಂದೆ ಸೂಚಿಸಿದ್ದರು ಸಹ ಬೇಜವಾಬ್ದಾರಿತನ ತೋರಿರುವುದು ಕಂಡುಬಂದಿರುವುದರಿಂದ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಜರುಗಿಸಲು ಸಮಿತಿಯು ಸೂಚಿಸಿದೆ.
2. ಇದೇ ರಿತಿ ಖಿರ್ಧಿ ಪುಸ್ತಕವನ್ನು ಸಹ ಪರಿಶೀಲಿಸಲಾಗಿ ಸದರಿ ಕಚೇರಿಯಲ್ಲಿ ಗಣಕಯಂತ್ರದಿಂದ ಬರುವ ಅಂಕಿಆಂಶಗಳ ಪಟ್ಟಿಯನ್ನು ತಂದು ಖಿರ್ಧಿ ಪುಸ್ತಕದಲ್ಲಿ ನಿರ್ವಹಣೆ ಮಾಡಲಾಗುತ್ತಿದೆ ಎಂದು ಸಿಬ್ಬಂದಿಗಳು ತಿಳಿಸಿದ್ದು, ಸದರಿ ಪುಸ್ತಕಗಳನ್ನು ಪರಿಶೀಲಿಸಿದರೆ ಇದನ್ನು ಸಹ ವಾರ್ಡ್–70ರ ಕಂದಾಯ ವಸೂಲಿಗಾರರು ದಿನಾಂಕ:30–6–2010ರಿಂದಲೂ ಸಹ ನಿರ್ವಹಿಸಿರುವುದಿಲ್ಲ
3. ಸದರಿ ಕಚೇರಿಯು ಮುಖ್ಯವಾಗಿ ಅಸ್ತಿ ತೆರಿಗೆ ವಸೂಲಿ ಮಾಡುವ ಕಚೇರಿಯಾಗಿದ್ದು, ಸಾರ್ವಜನಿಕರು ತಮ್ಮ ಆಸ್ತಿಗಳಿಗೆ ಸಂದಾಯ ಮಾಡುವ ಅಸ್ತಿ ತೆರಿಗೆಯನ್ನು ಚೆಕ್ ಅಥವಾ ಡಿ.ಡಿ. ಮುಖಾಂತರ ಪಾವತಿಸುತ್ತಾರೆ, ಈ ಚೆಕ್ಕುಗಳು ವಿವರ ಯಾವ ಆಸ್ತಿಗೆ ಸಂಬಂದಿಸಿದ್ದು, ಎಷ್ಟು ಮೊತ್ತ, ಎಷ್ಟು ಚೆಕ್ಕುಗಳು ಡಿಸಾನರ್ ಆಗಿದೆ ಇತ್ಯಾಧಿ ವಿವರಗಳನ್ನು ಒಂದು ರಿಜಿಸ್ಟರ್‌ನಲ್ಲಿ ದಾಖಲಿಸಬೇಕಾಗಿರುವುದು ಆಯ ಕಚೇರಿಯ ಕರ್ತವ್ಯ ಇದನ್ನು ಸಹ ನಿರ್ವಹಣೆ ಮಾಡದೆ ಎಲ್ಲಾ ಮಾಹಿತಿಯನ್ನು ಗಣಕೀಕರಣದಲ್ಲಿದೆ ಎಂಬ ಮಾಹಿತಿ ಒದಗಿಸುವುದು ಕಚೇರಿ ನಿರ್ವಹಣೆಯಲ್ಲದಿರುವುದರಿಂದ ಈ ಬಗ್ಗೆ ಕ್ರಮ ಜರುಗಿಸಲು ಸಮಿತಿಯು ಸೂಚಿಸಿದೆ.
4. ಸಹಾಯಕ ಕಂದಾಯ ಅಧಿಕಾರಿಗಳ ಕಚೇರಿಯಲ್ಲಿ ಪ್ರಮುಖವಾಗಿ ಇರಬೇಕಾದ ಆಸ್ತಿ ವಹಿ ಮಸ್ತಕವನ್ನು ನಿರ್ವಹಣೆ ಮಾಡದೇ ಇರುವುದರಿಂದ ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಒಟ್ಟಾರೆ ಎಷ್ಟು ಆಸ್ತಿಗಳು ಇವೆ ಇದರಲ್ಲಿ ಪಾಲಿಕೆ ಆಸ್ತಿ ಎಷ್ಟು, ಸರ್ಕಾರಿ ಆಸ್ತಿ ಎಷ್ಟು, ಖಾಸಗಿ ಆಸ್ತಿ ಎಷ್ಟು, ಉದ್ಯಾನವನ, ದೇವಸ್ಥಾನ ಇತ್ಯಾಧಿ ಬಗ್ಗೆ ಮಾಹಿತಿ ಒದಗಿಸಬೇಕಾದ ವಹಿಯನ್ನೇ ಸರಿಯಾಗಿ ನಿರ್ವಹಣೆ ಮಾಡದಿರುವುದು ಸಮಿತಿಗೆ ಕಂಡುಬಂದಿದೆ, ಅದ್ದರಿಂದ ಈ ಕುರಿತು ಸರಿಯಾದ ಲೆಕ್ಕಪತ್ರಗಳನ್ನು ಇಡಲು ಸಮಿತಿಯು ಸೂಚಿಸಿತು.

5. ಸದರಿ ಕಚೇರಿಯಲ್ಲಿ ತಮ್ಮ ಕಚೇರಿ ವ್ಯಾಪ್ತಿಗೆ ಬರುವ ವಾರ್ಡ್‌ಗಳಲ್ಲಿ ಎಷ್ಟು ಆಸ್ತಿಗಳಿವೆ ಎಷ್ಟು ವಾರ್ಷಿಕ ಬೇಡಿಕೆ ಇದೆ ಎಂಬ ಬಗ್ಗೆಯು ಸಹ ಮಾಹಿತಿ ಒದಗಿಸಲು ವಿಫಲರಾಗಿದ್ದು ಸರಿಯಾದ ಲೆಕ್ಕಪತ್ರಗಳನ್ನು ಇಡದೇ ಇರುವುದು ಕರ್ತವ್ಯ ನಿರ್ಲಕ್ಷವನ್ನು ತೋರಿಸಿದಂತಾಗಿದೆ.

6. ಕಳೆದ 3 ವರ್ಷಗಳಿಂದ ತಿರಸ್ಕೃತ ಆಗಿರುವ 80 ಚೆಕ್ಕುಗಳಲ್ಲಿ ಬರಬೇಕಾಗಿರುವ ರೂ:17.50 ಲಕ್ಷಗಳ ಬಗ್ಗೆ ಹಾಗು 2010–11ನೇ ಸಾಲಿನಲ್ಲಿಯೇ ಸುಮಾರು 34 ಚೆಕ್ಕುಗಳು ಡಿಸಾನರ್ ಆಗಿದ್ದು ಇದುವರೆವಿಗೂ ಯಾವುದೇ ಕ್ರಮಕೈಗೊಂಡಿರುವುದಿಲ್ಲ

    ಈ ಕುರಿತು ಜಂಟಿ ಆಯುಕ್ತರು ಮಾತನಾಡಿ ಸದರಿ ಕಛೇರಿಯಲ್ಲಿ ಆಡಿಟ್ ವರದಿ ಬಗ್ಗೆ ಅನುಸರಣಾ ವರಿದಿಯನ್ನು ಮಾಡದಿರುವುದು ಕಂಡುಬರುತ್ತಿದೆ, ಡಿಸಾನರ್ ಆಗಿರುವ ಚೆಕ್ಕುಗಳಲ್ಲಿ ಸ್ವತ್ತಿನ ಮಾಲೀಕರು ಸಿಗದಿದ್ದ ಪಕ್ಷದಲ್ಲಿ ಸಂಬಂದಪಟ್ಟ ಬ್ಯಾಂಕ್‌ಗೆ ಹೋಗಿ ಅಲ್ಲಿಂದ ವಿಳಾಸ ಪತ್ತೆ ಹಚ್ಚಬಹುದು, ಕಂದಾಯ ವಸೂಲಿಗಾರರು ವರ್ಗಾವಣೆ ಆಗಿದ್ದು ಏನು ಕ್ರಮಕೈಗೊಳ್ಳದಿದ್ದರೆ ಸಂಬಂಧಪಟ್ಟ ಕಂದಾಯ ವಸೂಲಿಗಾರರನ್ನು ಸೇರಿಸಿ ಮೊಕದ್ದಮ್ಮೆ ಹೂಡಲು ಸೂಚಿಸಿದರು.

    ಈ ಕುರಿತು ಅಧ್ಯಕ್ಷರು ಎಷ್ಟು ಕೇಸ್‌ಗಳಿಗೆ ಇದುವರೆವಿಗೆ ಕೇಸ್ ಹಾಕಲಾಗಿದೆ, ಎಷ್ಟು ಚೆಕ್ಕುಗಳು ಡಿಸಾನರ್ ಆಗಿವೆ ಎಂಬ ಬಗ್ಗೆ ಪರಿಶೀಲಿಸಿದಾಗ ಸರಿಯಾದ ಮಾಹಿತಿಯನ್ನು ಕಚೇರಿಯಲ್ಲಿ ಇಡದಿರುವುದು ಕಂಡುಬಂದಿದೆ.

7. ಪಿ.ಐ.ಡಿ.ನಂ.76–22–34/14ಸ್ವತ್ತಿಗೆ ಸಂಬಂದಿಸಿದಂತೆ ಸುಮಾರು 39,279–00ರೂಗಳ ಹೈದ್ರಾಬಾದ್ ಶಾಖೆಯ ಶಾಂಘೈ ಬ್ಯಾಂಕ್ ಚೆಕ್ಕ ಪಡೆದಿದ್ದು ಈ ಚೆಕ್ ವಾಪಸ್ಸು ಬಂದು ಸುಮಾರು 9 ತಿಂಗಳು ಕಳೆದರು ಸಹ ಇದುವರೆವಿಗೂ ಕ್ರಮಕೈಗೊಂಡಿರುವುದಿಲ್ಲ. ಈ ರೀತಿ ಹೊರ ರಾಜ್ಯದ ಚೆಕ್ಕನ್ನು ಪಡೆದಿರುವುದು ನಿಯಮಬಾಹಿರ ಈಸಂಬಂಧಪಟ್ಟವರ ಕ್ರಮ ಜರುಗಿಸಲು ಸಮಿತಿಯು ಸೂಚಿಸಿದೆ.

8. ಜಂಟಿ ಆಯುಕ್ತರು(ಪೂರ್ವ)ರವರು ಸದರಿ ಕಚೇರಿಯಲ್ಲಿ ನಗದು ಪುಸ್ತಕವಿಲ್ಲ, ಡಿ.ಸಿ.ಬಿ ನಿರ್ವಹಣೆ ಸರಿಯಾಗಿ ಇಲ್ಲದಿರುವುದು ಹಾಗೆಯ ಆಡಿಟ್ ಅಕ್ಷೇಪಣೆಗೆ ಸರಿಯಾದ ಮಾಹಿತಿ ನೀಡಿರುವುದಿಲ್ಲ, ಅಸ್ತಿ ವಹಿ ನಿರ್ವಹಣೆ ಸರಿಯಾಗಿಲ್ಲದಿರುವುದು ಕಂಡುಬರುತ್ತಿದ್ದು, ಒಟ್ಟಾರೆ ನಿಯಮಾಳಿಯಂತೆ ಕಚೇರಿಯು ಕಾರ್ಯನಿರ್ವಹಿಸುತ್ತಿಲ್ಲವೆಂದು ಸ್ಪಷ್ಟಪಡಿಸಿರುತ್ತಾರೆ.

9. ಕಸ್ತೂರ್ ಬಾ ರಸ್ತೆಯಲ್ಲಿ ಆಸ್ತಿ ಸಂಖ್ಯೆ:76ರಲ್ಲಿ ಸುಮಾರು 34,49,873–00ಗಳನ್ನು ತೆರಿಗೆ ಬಾಕಿ ವಸೂಲಿ ಮಾಡುವಂತೆ ಆಡಿಟ್ ಆಕ್ಷೇಪಣೆ ಮಾಡಿ ಸುಮಾರು 3 ವರ್ಷ ಕಳೆದರು ಸಹ ಯಾವುದೇ ಕ್ರಮಕೈಗೊಂಡಿರುವುದಿಲ್ಲ, ಸಮಿತಿಯ ವತಿಯಿಂದ ಒತ್ತಡ ಹಾಕಿದ ನಂತರ ಈ ಮೊತ್ತವನ್ನು ವಸೂಲಿ ಮಾಡಿಸಿ ಪಾಲಿಕೆ ಖಜಾನೆಗೆ ಜಮಾ ಮಾಡಿಸಲಾಗಿದೆ, ಈ ವಿಳಂಬಕ್ಕೆ ಕಾರಣರಾದವರ ಮೇಲೆ ಸೂಕ್ತ ಕ್ರಮ ಜರುಗಿಸಲು ಸಹ ಸಮಿತಿಯು ಈ ಮೂಲಕ ಶಿಫಾರಸ್ಸು ಮಾಡಿದೆ.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

<u>ಪ್ರತಿಯನ್ನು:</u>

:ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
:ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.

**<u>ಲೆಕ್ಕಪತ್ರ ಸ್ಥಾಯಿ ಸಮಿತಿಯ ವತಿಯಿಂದ ದಿನಾಂಕ:7/1/2011ರಂದು ಬೆಳಿಗ್ಗೆ 10–30ಕ್ಕೆ ಆರೋಗ್ಯ ವೈದ್ಯಾಧಿಕಾರಿ(ಸಿ.ವಿ.ರಾಮನ್ ನಗರ) ಕಚೇರಿಯನ್ನು ತಪಾಸಣೆ ನಡೆಸಿದ ಬಗ್ಗೆ ವರದಿ:–</u>**

**<u>ಹಾಜರಿದ್ದ ಸದಸ್ಯರುಗಳು:–</u>**

| | |
|---|---|
| ಶ್ರೀ.ಗಂಗಭೈರಯ್ಯ | ಅಧ್ಯಕ್ಷರು |
| ಶ್ರೀಮತಿ.ಚೇತನಗೌಡ | ಸದಸ್ಯರು |
| ಶ್ರೀ.ಹನುಮಂತೇಗೌಡ | ಸದಸ್ಯರು |
| ಶ್ರೀ.ಓ.ಮಂಜುನಾಥ್, | ಸದಸ್ಯರು |
| ಶ್ರೀಮತಿ. ಕ್ವೀನ್ ಎಲಿಜಬತ್ | ಸದಸ್ಯರು |
| ಶ್ರೀ.ತಿಮ್ಮರಾಜು | ಸದಸ್ಯರು |

1. ಸದರಿ ಕಚೇರಿಯನ್ನು ಸಮಿತಿಯ ವತಿಯಿಂದ ತಪಾಸಣೆ ಮಾಡಲಾಗಿ ಕಚೇರಿಯಲ್ಲಿ ನಗದು ಪುಸ್ತಕವನ್ನು ನಿರ್ವಹಣೆ ಮಾಡಿದ್ದಾಗ್ಯು ನಿಯಮಾನುಸಾರ ಅದರಲ್ಲಿ ಮಾಹಿತಿಗಳನ್ನು ದಾಖಲಿಸಿರುವುದಿಲ್ಲ. ಅದರಲ್ಲಿರುವಂತೆ ವಸೂಲಾತಿ ದಿನಗಳಲ್ಲಿ ಸ್ವೀಕರಿಸಲ್ಪಟ್ಟ ಮೊಬಲಗು ಹಾಗು ಅಷ್ಟೇ ಮೊಬಲಗನ್ನು ಬ್ಯಾಂಕಿಗೆ ಜಮಾ ಮಾಡಿದ ಪೂರ್ಣ ಮಾಹಿತಿಯನ್ನು ದಾಖಲಿಸಿರುವುದಿಲ್ಲ. ಅಲ್ಲದೆ ಕೆಲವು ವಸೂಲಿಗಳನ್ನು ನಮೂದಿಸಿದ್ದಾಗ್ಯು ಯಾವ ರಸೀತಿಗಳಿಂದ ಸದರಿ ಮೊಬಲಗು ವಸೂಲಾಗಿರುತ್ತದೆ ಎಂದು ಪೂರ್ಣ ಮಾಹಿತಿ ಲಭ್ಯವಿರುವುದಿಲ್ಲ. ಪ್ರತಿ ನಿತ್ಯ ನಗದು ಪುಸ್ತಕವನ್ನು ಬರೆಯದೆ 5ದಿನಕ್ಕೆ ಒಮ್ಮೆ ಒಂದೇ ಭಾರಿ ಬರೆದು ಕ್ಲೋಸ್ ಮಾಡಲಾಗಿರುವುದು ತಪಾಸಣೆಯಲ್ಲಿ ಕಂಡುಬಂದಿರುವುದರಿಂದ ಈ ಕ್ರಮ ನಿಯಮಬದ್ಧವಲ್ಲವಾಗಿರವುದರಿಂದ ಕೂಡಲೇ ಸರಿಪಡಿಸಲು ಸಮಿತಿಯು ಸೂಚಿಸಿರು.

2. ಪಾಲಿಕೆಯಲ್ಲಿ ಲೆಕ್ಕಪರಿಶೋಧಕರು ಸೂಚಿಸುವ ಅಕ್ಷೇಪಣೆ ಈ ಕಚೇರಿಯಲ್ಲಿ ಸರಿಯಾದ ಮಾಹಿತಿಗಳನ್ನು ಇಡದೇ ಇರುವುದು ಕಂಡುಬಂದಿದ್ದು, 2007–08 ಮತ್ತು 2008–9ನೇ ಸಾಲಿನಲ್ಲಿ ಮುಖ್ಯ ಲೆಕ್ಕ ಪರಿಶೋಧಕರು ನೀಡಿರುವ ಲೆಕ್ಕ ಪರಿಶೋಧನ ವರದಿಗಳಲ್ಲಿ ಸೂಚಿಸಿರುವ ಆಕ್ಷೇಪಣೆಗಳಿಗೆ ಇದುವರೆವಿಗೂ ಯಾವುದೇ ಉತ್ತರವನ್ನು ಒದಗಿಸಿಲ್ಲದಿರುವುದು ಕಚೇರಿ ಅಧಿಕಾರಿ ಸಿಬ್ಬಂದಿಯ ನಿರ್ಲಕ್ಷತನವೆಂದು ಸಮಿತಿಗೆ ಕಂಡುಬಂದಿದೆ ಆದ್ದರಿಂದ ಈ ಕುರಿತು ಕ್ರಮಜರುಗಿಸಲು ಸಮಿತಿಯು ಸೂಚಿಸಿದೆ.

3. ಸದರಿ ಕಚೇರಿಯಿಂದ ಎನ್.ಪುಟ್ಟರಾಜು 4ನೇ ದರ್ಜೆ ನೌಕರ ರವರು ಬೇರೆ ಕಚೇರಿಯಲ್ಲಿ ಓ.ಓ.ಡಿ ಮೇಲೆ ಸುಮಾರು 2–3 ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದು, ಇವರ ಹಾಜರಾತಿ ಧೃಡೀಕರಣ ಪತ್ರ ಇಲ್ಲದಿದ್ದರು ಸಹ ವೇತನ ನೀಡಿರುವುದು ತಪಾಸಣೆಯಲ್ಲಿ ಕಂಡುಬಂದಿದೆ.

4. ತಪಾಸಣೆಯಲ್ಲಿ ಪರವಾನಗಿ ನೀಡುವ ಪುಸ್ತಕವನ್ನು ಸಹ ಪರಿಶೀಲಿಸಲಾಯಿತು, ಟ್ರೇಡ್ ಲೈಸೆನ್ಸ್ ಪರವಾನಗಿ ನೀಡುವಾಗ ಉದ್ದಿಮೆದಾರರಿಂದ ವಸೂಲಿ ಮಾಡುವ ಮೊತ್ತಕ್ಕೆ ಡಿ.ಡಿ.ಗಳನ್ನು ಪಡೆದಿರುವುದು ಕಂಡುಬಂದಿದ್ದು, ಸದರಿ ಡಿ.ಡಿ.ಗಳನ್ನು ದಿನಾಂಕ 9–8–2010ರಲ್ಲಿ ಇರಿಸಾಲು ಮಾಡಲಾಗಿರುತ್ತದೆ. ಸದರಿ ಚಲನ್‌ಗಳಲ್ಲಿ ರೂ:12125–00ಗಳನ್ನು ನಮೂದಿಸಿದ್ದು, ಒಟ್ಟು ಮೊಬಲಿಗಿನ ಕಾಲಂನಲ್ಲಿ ರೂ15125–00ಗಳಿಗೆ ತಿದ್ದಲಾಗಿದೆ. ಈ ಬಗ್ಗೆ ಸಂಬಂಧಪಟ್ಟ ವಸೂಲಿಗಾರರ ಶ್ರೀ.ತಿಮ್ಮೇಗೌಡ ರವರನ್ನು ವಿಚಾರಿಸಲಾಗಿ ಸೂಕ್ತ ವಿವರಣೆಯನ್ನು ನೀಡಲು ವಿಫಲರಾಗಿರುತ್ತಾರೆ, ಇಂತಹ ತಿದ್ದಲಾಗಿರುವ ಹಲವಾರು ಚಲನ್‌ಗಳು ಕಡತದಲ್ಲಿ ಕಂಡು ಬರುತ್ತಿದ್ದು ಈ ಕುರಿತು ಪರಿಶೀಲನೆ ನಡೆಸಿ ಕ್ರಮ ಜರುಗಿಸಲು ಸಮಿತಿಯು ಸೂಚಿಸಿದೆ. (ಮಾಹಿತಿ ಲಗತ್ತಿಸಿದೆ)

5. ಸಾರ್ವಜನಿಕರಿಂದ ಉದ್ದಿಮೆ ಪರವಾನಗಿ ನೀಡುವಾಗ ಡಿ.ಡಿ.ಗಳನ್ನು ಪಡೆದಿದ್ದು, ಸುಮಾರು ರೂ:22760–00 ಮೊತ್ತದ ಡಿ.ಡಿ.ಗಳನ್ನು ದಿನಾಂಕ:29–12–2009ರಲ್ಲಿ ಪಡೆದು ದಿನಾಂಕ:7–5–10ರಲ್ಲಿ ಪಾಲಿಕೆ ಖಜಾನೆಗೆ ಜಮಾ ಮಾಡಿರುವುದು ಚಲನ್‌ನಲ್ಲಿ ಕಂಡುಬರುತ್ತಿರುವುದರಿಂದ ಅನುಮಾನಾಸ್ಪದವಾಗಿದೆ. ಅದ್ದರಿಂದ ಈ ಕುರಿತು ಕ್ರಮಜರುಗಿಸಲು ಸಮಿತಿಯು ಸೂಚಿಸಿದೆ.

6. ಸದರಿ ಕಚೇರಿಯಲ್ಲಿ ಉಪಯೋಗಿಸಿರುವ ರಸೀದಿ ಪುಸ್ತಕ ಸಂಖ್ಯೆ:605ರ ಪ್ರತಿ 10730 ದಿನಾಂಕ:16–12–2010ರಲ್ಲಿ ಒಂದೇ ಡಿ.ಡಿ.ಸಂಖ್ಯೆ:374924, ದಿ:8–12–10ರಲ್ಲಿ ರೂ: 2400ಗಳನ್ನು ವಸೂಲಿ ಮಾಡಿದ್ದರು ಸಹ ರಸೀದಿಯಲ್ಲಿ ಸದರಿ ಮೊಬಲಗನ್ನು ರೂ:1200–00 ಎಂದು 2 ಬಾಗವಾಗಿ ವಿಭಜಿಸಿರುತ್ತಾರೆ ಈ ಬಗ್ಗೆ ವಿವರಣೆ ನೀಡಲು ಸಂಬಂದಪಟ್ಟವರು ವಿಫಲರಾಗಿರುತ್ತಾರೆ. ಇದೇ ಸಂಖ್ಯೆ ರಸೀತಿಯಲ್ಲಿ ಡಿ.ಡಿ.ಸಂಖ್ಯೆ:374925, ದಿ:8/12/10ರಲ್ಲಿ ರೂ:600–00ಗಳನ್ನು ವಸೂಲಿ ಮಾಡಿದ್ದರು ಸಹ ಬ್ಯಾಂಕ್ ಚಲನ್‌ನಲ್ಲಿ ರೂ:800–00 ಎಂದು ನಮುದಿಸಿ ರಸಿದಿಯಲ್ಲೂ ಸಹ ಇದೇ ಮೊತ್ತ ನಮೂದಿಸಿ ಗೊಂದಲಕ್ಕೆ ಅವಕಾಶ ಮಾಡಿಕೊಟ್ಟಿರುತ್ತಾರೆ ಇದು ಸಹ ಸಮಿತಿಗೆ ಅನುಮಾನಾಸ್ಪದವಾಗಿ ಕಂಡುಬಂದಿದೆ.

7. ಸದರಿ ಕಚೇರಿಯ ರಸೀದಿ ಪುಸ್ತಕ ಸಂಖ್ಯೆ:207ರಲ್ಲಿ ರಸೀತಿ ಸಂಖ್ಯೆ:10308 ದಿ:8–4–10 ಹಾಗೆಯೇ ರಸೀದಿ ಸಂಖ್ಯೆ:10310 ದಿ:19–4–10ರಲ್ಲಿ ಉಪಯೋಗಿಸಲ್ಪಟ್ಟಿರುತ್ತವೆ ಆದರೆ ಇವರೆಡರ ಮದ್ಯದಲ್ಲಿ ಬರುವ ರಸೀದಿಯನ್ನು ಉಪಯೋಗಿಸದೆ ದ್ವಿ ಪ್ರತಿಯಲ್ಲಿ ಹಾಗೆಯೇ ಉಳಿಸಿಕೊಂಡಿರುತ್ತಾರೆ. ಸದರಿ ಈ ರಸೀದಿಯನ್ನು ಪರಿಶೀಲಿಸಲಾಗಿ ಯಾವುದೇ ನ್ಯೂನತೆ ಇಲ್ಲದಿದ್ದರೂ ಸಹ ಉಪಯೋಗಿಸದೆ ಹಾಗೆಯೇ ಉಳಿಸಿರುವುದಕ್ಕೆ ಕಾರಣವನ್ನು ನೀಡಲು ಅಧಿಕಾರಿ ಸಿಬ್ಬಂದಿಗಳು ವಿಫಲರಾಗಿರುತ್ತಾರೆ. ಇದು ಸಂಶಯಕ್ಕೆ ಎಡೆಮಾಡಿಕೊಡುತ್ತದೆ. (ವಿವರ ಲಗತ್ತಿಸಿದೆ)

8. ಇದೇ ರೀತಿ ರಸೀದಿ ಪುಸ್ತಕ ಸಂಖ್ಯೆ 207ರಲ್ಲಿನ ರಸೀದಿಗಳ ಸಂಖ್ಯೆ:10324 ರಿಂದ 10332 ರವರೆಗೆ ದಿನಾಂಕಗಳನ್ನು ನಮೂದಿಸದೆ ಡಿ.ಡಿ.ಮೊಬಲಗುಗಳನ್ನು ಮಾತ್ರ ನಮೂದಿಸಿರುವದರಿಂದ ಯಾವ ದಿನಾಂಕದಂದು ರಸೀದಿ ಬರೆಯಲಾಗಿದೆ ಅಥವಾ ವಸೂಲಿ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಲು ಸಾಧ್ಯವಾಗದ ಕಾರಣ ಪಾಲಿಕೆಯ ಹಣ ದುರುಪಯೋಗವಾಗುವ ಸಂಭವ ಇರುತ್ತದೆ, ಅದ್ದರಿಂದ ಈ ಬಗ್ಗೆ ಸೂಕ್ತ ಕ್ರಮಜರುಗಿಸಲು ಸಮಿತಿಯು ಸೂಚಿಸಿದೆ.

9. ರಸೀದಿ ಪುಸ್ತಕ ಸಂಖ್ಯೆ:207ರ ರಸೀದಿ ಸಂಖ್ಯೆ:10323ರಲ್ಲಿ ರೂ:2000–00ಗಳನ್ನು ದಿನಾಂಕ:30–6–10ರಲ್ಲಿ ವಸೂಲಿ ಮಾಡಿದ್ದು, ಈ ಮೊಬಲಗನ್ನು ದಿನಾಂಕ:9–8–2010ರಲ್ಲಿ ಸುಮಾರು ಒಂದು ತಿಂಗಳಿಗೂ ಮೇಲ್ಪಟ್ಟು ಜಮಾಮಾಡಲಾಗಿದೆ. ಇದಕ್ಕೆ ಕಾರಣ ಕೇಳಿದರೆ ಯಾವುದೇ ಅಧಿಕಾರಿ ಸಿಬ್ಬಂದಿಗಳ ಮೌನವೇ ಉತ್ತರವಾಗಿತ್ತು.

10. ಸದರಿ ಕಚೇರಿಯಲ್ಲಿ ಉದ್ದಿಮೆ ಪರವಾನಗಿ ನೀಡುವಾಗ ಡಿ.ಡಿ.ಸಂಖ್ಯೆ:252430 ವಿಜಯ ಬ್ಯಾಂಕ್, ಈ ಡಿ.ಡಿ.ಯನ್ನು 3ಜನ ಉದ್ದಿಮೆದಾರರಿಗೆ (ಅಂದರೆ ಲೈಸೆನ್ಸ್ ಸಂಖ್ಯೆ:128/8–9, 129/8–9, 5/7–8ರ ) ರಸೀದಿ ಸಂಖ್ಯೆ:247558,ದಿ:23/2/10, 10156ದಿ:2–3–10 ಮತ್ತು ರಸೀದಿ ಸಂಖ್ಯೆ:10155 ದಿ:2–3–10ರಲ್ಲಿ ಒಂದೇ ಡಿ.ಡಿ.ಸಂಖ್ಯೆಯನ್ನು ನಮೂದಿಸಿ ಪಾಲಿಕೆಗೆ ಆರ್ಥಿಕ ನಷ್ಟ ಉಂಟುಮಾಡಿರುತ್ತಾರೆ.

11. ವಾರ್ಡ್ ಸಂಖ್ಯೆ: 84 ರ ಪರವಾನಗಿ ಡಿ.ಸಿ.ಬಿಯನ್ನು ಪರಿಶೀಲಿಸಲಾಗಿ ಇದರ ಪುಟ ಸಂಖ್ಯೆ:54ರ ಕ್ರಮ ಸಂಖ್ಯೆ:32ರಲ್ಲಿ ಶ್ರೀ.ಅನಿಲ್ ಮಾಲೀಕತ್ವದ ನಿಮಿ ಹಾಸ್ಪಿಟಾಲಿಟಿ ರವರಿಗೆ ಉದ್ದಿಮೆ ಪರವಾನಿಗಿ ನೀಡುವ ಸಂಬಂಧ ಪರವಾನಗಿದಾರರಿಗೆ ಅನುಮತಿ ನೀಡುವ ಸಮಯದಲ್ಲಿ ಪಡೆಯುವ ದಾಖಲಾತಿಯಲ್ಲಿ ಹೋಟೆಲ್ ವ್ಯವಹಾರ ಎಂದು ಶ್ರೀ.ಅನಿಲ್ ರವರು ಕಟ್ಟಡದ ಮಾಲೀಕರೊಂದಿಗೆ ಮಾಡಿಕೊಂಡಿರುವ ಕರಾರು ಪತ್ರವನ್ನು ನೀಡಿದ್ದರು ಸಹ ಅದನ್ನು ಮರೆಮಾಚಿ ಈಟಿಂಗ್ ಮೆಸ್ ಎಂದು ರೂ:1000–00 ಶುಲ್ಕವನ್ನು 2009–10ಕ್ಕೆ ಪಡೆಯಲಾಗಿರುತ್ತದೆ, ಇದೇ ಉದ್ದಿಮೆಗೆ 2010–11ನೇ ಸಾಲಿನ ನವೀಕರಣ ಸಮಯದಲ್ಲಿ ರಸ್ಟೋರೆಂಟ್ ಎಂದು ಬರೆದು ರೂ:10000–00ಗಳನ್ನು ಪಡೆಯಲಾಗಿರುತ್ತದೆ. ಅದರೆ 2009–10ನೇ ಸಾಲಿನಲ್ಲಿ ರೂ:9000–00 ಕಡಿಮೆ ಪರವಾನಗಿ ಶುಲ್ಕ ವಸೂಲಿ ಮಾಡಿ ಪಾಲಿಕೆಗೆ ನಷ್ಟ ಉಂಟು ಮಾಡಿರುವುದು ಕಂಡುಬಂದಿದೆ. (ದಾಖಲೆ ಲಗತ್ತಿಸಿದೆ)

12. ವಾರ್ಡ್ ಸಂಖ್ಯೆ: 84 ರ ಪರವಾನಗಿ ಡಿ.ಸಿ.ಬಿಯನ್ನು ಪರಿಶೀಲಿಸಲಾಗಿ ಇದರ ಪುಟ ಸಂಖ್ಯೆ:55ರ ಕ್ರಮ ಸಂಖ್ಯೆ:36ರಲ್ಲಿ ಮೆ:ಧನಾವ್ ಫುಡ್ ಹಾಸ್ಪಿಟಾಲಿಟಿ ರವರಿಗೆ ಎ.ಸಿ. ರೆಸ್ಟೋರೆಂಟ್‌ಗೆ ಉದ್ದಿಮೆ ಪರವಾನಿಗಿ ನೀಡುವ ಸಂಬಂಧ ಪರಿಶೀಲಿಸಲಾಗಿ ಕಡತದಲ್ಲಿ ಪರವಾನಗಿ ಅದೇಶದ ದಿನಾಂಕವನ್ನು ಬದಲಿಸಿರುವುದು ಕಂಡುಬರುತ್ತದೆ. ಹಾಗು 2009–10ನೇ ಸಾಲಿಗೆ ರೂ:25400–00ಗಳನ್ನು ರಸೀದಿ ಸಂಖ್ಯೆ:132200 ದಿ:16/4/10ರಲ್ಲಿ ವಸೂಲಿಗಿದೆ ಎಂದು ನಮೂದಿಸಿರುತ್ತದೆ. ಮತ್ತೊಮ್ಮೆ ಹಾಗೆಯೇ 2010–11ನೇ ಸಾಲಿಗೆ ರಸೀದಿ ಸಂಖ್ಯೆ:10294, ದಿ:30–4–10ರಲ್ಲಿ ರೂ:25000–00ಗಳನ್ನು ವಸೂಲಿ ಮಾಡಿರುವುದಾಗಿ ನಮೂದಿಸಿರುತ್ತಾರೆ ಆದರೆ ಈ ವಸೂಲಿಗಳ ಮೇಲೆ ಹಾಗು ಮಂಜೂರಾತಿ ದಿನಾಂಕದ ಮೇಲೆ ಬಿಳಿ ಇಂಕ್ ಬಳಿದು ಮಾಹಿತಿಯು ಅಸ್ಪಷ್ಟವಾಗಿರುವಂತೆ ಮಾಡಿ ಸಂಶಯಕ್ಕೆ ಎಡೆ ಮಾಡಿಕೊಡುತ್ತಿದೆ. (ದಾಖಲೆ ಲಗತ್ತಿಸಿದೆ)

13. ಸದರಿ ಕಚೇರಿಯ ಹಾಜರಾತಿ ಪುಸ್ತಕವನ್ನು ಪರಿಶೀಲಿಸಲಾಗಿ ಶ್ರೀ.ಪುಟ್ಟರಾಜು 4ನೇ ದರ್ಜೆ ನೌಕರ ರವರು ಸುಮಾರು 6–7 ವರ್ಷದಿಂದ ಓ.ಓ.ಡಿ ಮೇಲೆ ಇತರೆ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ, ಈ ಬಗ್ಗೆ ಡಿಸೆಂಬರ್ ಮಾಹೆಯ ವೇತನ ನೀಡಿರುವ ಬಗ್ಗೆ ಪರಿಶೀಲಿಸಲಾಗಿ ಸದರಿ ನೌಕರರಿಂದ ಹಾಜರಾತಿ

ದೃಢೀಕರಣ ಪತ್ರ ಪಡೆಯದೆ ವೇತನ ಪಾವತಿ ಮಾಡಿರುವುದು ಕಂಡುಬಂದಿದೆ, ಈ ಕುರಿತು ಸದರಿ ಕಚೇರಿ ಗುಮಾಸ್ತರವನ್ನು ವಿಚಾರಿಸಿದರೆ ಇದುವರೆವಿಗೂ ಸರ್ಟಿಫಿಕೇಟ್ ಪಡೆದಿರುವುದಿಲ್ಲವೆಂದು ಹಾರಿಕೆ ಉತ್ತರವನ್ನು ಸಮಿತಿಗೆ ನೀಡಿರುತ್ತಾರೆ.

14. ಔಷಧಿ ಖರೀದಿಸಿರುವ ಸ್ಟಾಕ್ ಪುಸ್ತಕವನ್ನು ಪರಿಶೀಲಿಸಲಾಗಿ, ಸದರಿ ಪುಸ್ತಕವನ್ನು ಸರಿಯಾಗಿ ನಿರ್ವಹಣೆ ಮಾಡಿದ್ದು, ಈ ಕುರಿತು ಖರೀದಿಸಿರುವ ಯಾವುದಾರೊಂದು ಬಿಲ್ಲನ್ನು ಪರಿಶೀಲನೆಗೆ ಒದಗಿಸಲು ಸೂಚಿಸಿದಾಗ ಕಡತವು ಮೇಲಧಿಕಾರಿಗಳಿಗೆ ಕಳುಹಿಸಿರುವುದಾಗಿ ತಿಳಿಸಿದ್ದು, ಕಡತ ಕಳುಹಿಸಿರುವ ಬಗ್ಗೆ ಮಾಹಿತಿ ನೀಡಲು ವಿಫಲರಾಗಿರುತ್ತಾರೆ.

ಅದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳ ಮೇಲೆ ಕ್ರಮಜರುಗಿಸಲು ಸಮಿತಿಯು ಅಯುಕ್ತರಿಗೆ ಸೂಚಿಸಿದೆ.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

:ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
:ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.

## ಲೆಕ್ಕಪತ್ರ ಸ್ಥಾಯಿ ಸಮಿತಿಯ ವತಿಯಿಂದ ದಿನಾಂಕ:10/1/2011ರಂದು ಬೆಳಿಗ್ಗೆ 10–30ಕ್ಕೆ ಉಪ ಅಯುಕ್ತರು(ಆಸ್ತಿಗಳು) ಕಚೇರಿಯನ್ನು ತಪಾಸಣೆ ನಡೆಸಿದ ಬಗ್ಗೆ ವರದಿ:–

**ಹಾಜರಿದ್ದ ಸದಸ್ಯರುಗಳು:–**

ಶ್ರೀ.ಗಂಗಭೈರಯ್ಯ ಅಧ್ಯಕ್ಷರು
ಶ್ರೀಮತಿ.ಚೇತನಗೌಡ ಸದಸ್ಯರು
ಶ್ರೀಮತಿ. ಕ್ವೀನ್ ಎಲಿಜಬತ್ ಸದಸ್ಯರು
ಶ್ರೀಮತಿ. ಶಕುಂತಲ ಸದಸ್ಯರು
ಶ್ರೀ.ನೂರ್ ಜಾನ್ ಷರೀಫ್, ಸದಸ್ಯರು
ಶ್ರೀ ಎನ್.ಎಂ.ಕೃಷ್ಣಮೂರ್ತಿ ಸದಸ್ಯರು

1. ಉಪ ಅಯುಕ್ತರು(ಆಸ್ತಿಗಳು)ರವರ ಕಚೇರಿಯನ್ನು ಸಮಿತಿಯ ಸದಸ್ಯರೊಂದಿಗೆ ತಪಾಸಣೆ ನಡೆಸಲಾಯಿತು ಆ ಸಮಯದಲ್ಲಿ ಕಚೇರಿಯಲ್ಲಿ ನಿರ್ವಹಿಸಬೇಕಾಗಿದ್ದ ನಗದು ಪುಸ್ತಕವನ್ನು ಸಹ ಪರಿಶೀಲಿಸಿದಾಗ ಸದರಿ ಪುಸ್ತಕವನ್ನು ದಿನಾಂಕ:11/1/2010ರಿಂದ ಅಂದರೆ ಸುಮಾರು ಒಂದು ವರ್ಷದಿಂದ ನಿರ್ವಹಣೆ ಮಾಡಿಲ್ಲದಿರುವುದು ಕಂಡುಬಂದಿದೆ, ಈ ಬಗ್ಗೆ ಸಮತಿಯ ವತಿಯಿಂದ ಪರಿಚಯ ಸಭೆಯಲ್ಲಿಯೂ ಸಹ ಸೂಚಿಸಿದ್ದರು ಸಹ ಅಧಿಕಾರಿ ಸಿಬ್ಬಂದಿಗಳು ಕಡತ ನಿರ್ವಹಣೆಯಲ್ಲಿ ಅಸಡ್ಡೆ ತೋರಿರುವುದು ಕಂಡುಬಂದಿದೆ, ಅದ್ದರಿಂದ ಈ ಕುರಿತು ಆಯುಕ್ತರು ಸೂಕ್ರ ಕ್ರಮಕೈಗೊಳ್ಳಲು ಸಮಿತಿಯು ಸೂಚಿಸಿದೆ.

2. ಸದರಿ ಕಚೇರಿಯಲ್ಲಿ ಹುಂಡಿ ಪುಸ್ತಕವನ್ನು ನಿರ್ವಹಣೆ ಮಾಡಿದ್ದು, ಈ ಪುಸ್ತಕವನ್ನು ಸಹ ದಿನಾಂಕ:10–3–10ರಿಂದ ನಿರ್ವಹಣೆ ಮಾಡಿರುವುದಿಲ್ಲದಿರುವುದು ತಪಾಸಣೆಯಲ್ಲಿ ಕಂಡುಬಂದಿದೆ, ಇಲ್ಲಿಯೂ ಸಹ ಅಧಿಕಾರಿ ಸಿಬ್ಬಂದಿಯು ಅಸಡ್ಡೆ ತೋರಿರುವುದರಿಂದ ಆಯುಕ್ತರು ಸೂಕ್ತ ಕ್ರಮಕೈಗೊಳ್ಳಲು ಸಮಿತಿಯು ಸೂಚಿಸಿದೆ.
3. ಮೂವ್‌ಮೆಂಟ್ ರಿಜಿಸ್ಟರ್ ಅನ್ನು ಪ್ರತಿ ಕಚೇರಿಯಲ್ಲಿಯು ಸಹ ನಿರ್ವಹಣೆ ಮಾಡಬೇಕಾಗಿದ್ದು, ಇದರಿಂದ ಅಧಿಕಾರಿ ಸಿಬ್ಬಂದಿಯ ಚಲನವಲನದ ಮೇಲೆ ನಿಗಾ ವಹಿಸುವುದು ಸುಲಭವಾಗುತ್ತದೆ, ಆದರೆ ಸದರೆ ಕಚೇರಿಯಲ್ಲಿ ರಿಜಿಸ್ಟರ್ ಅನ್ನು ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲ ಇದು ಸಹ ಅದಿಕಾರಿ ಸಿಬ್ಬಂದಿಯ ನಿರ್ಲಕ್ಷ್ಯತನ ಕಂಡುಬಂದಿರುವುದರಿಂದ ಈ ಕುರಿತು ಕ್ರಮ ಜರುಗಿಸಲು ಸಮಿತಿಯು ಸೂಚಿಸಿದೆ.
4. ಸದರಿ ಕಚೇರಿಯಲ್ಲಿ 4ನೇ ದರ್ಜೆ ನೌಕರರಾದ ಶ್ರೀ.ಶ್ರೀನಿವಾಸ ರವರ ವೇತನ ಬಟವಾಡೆ ಸ್ಥಳ ಬೇರೆ ಕಚೇರಿಯಲ್ಲಿ ಇದ್ದು, ಓ.ಡಿ ಮೇಲೆ ಬೇರೆ ಕಡೆ ಕಾರ್ಯನಿರ್ವಹಿಸುತ್ತಿದ್ದರು ಸಹ ಈ ಕಚೇರಿಯಲ್ಲಿ ಹಾಜರಾತಿ ಪುಸ್ತಕದಲ್ಲಿ ನಿರ್ವಹಣೆ ಮಾಡುತ್ತಿರುವುದು ಅವೈಜ್ಞಾನಿಕವಾಗಿದ್ದು, ಈ ಬಗ್ಗೆ ಯಾವುದೇ ಅಧಿಕಾರಿಯು ಗಮನಹರಿಸದಿರುವುದು ಕಂಡುಬಂದಿದೆ.
5. ಸದರಿ ಕಚೇರಿಯಿಂದ ಮುಖ್ಯ ಲೆಕ್ಕಪರಿಶೋಧಕರು ನೀಡು ಆಕ್ಷೇಪಣೆಗಳಿಗೆ ಅನುಸರಣಾ ವರದಿ ನೀಡಿರುವ ಬಗ್ಗೆ ಯಾವುದೇ ಕಡತಗಳ ಲಭ್ಯವಿಲ್ಲದೆ ಇರುವುದು ಸಮಿತಿಗೆ ಕಂಡುಬಂದಿದ್ದು,

2007–2008ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಇದುವರೆವಿಗೂ ಕ್ರಮಕೈಗೊಂಡಿಲ್ಲದಿರುವುದರಿಂದ ಈ ಬಗ್ಗೆ ಕ್ರಮಕೈಗೊಳ್ಳಲು ಸಮಿತಿಯು ಸೂಚಿಸಿದೆ.

6. ಗುತ್ತಿಗೆ ನೀಡಿರುವ 221 ಅಸ್ತಿಗಳ ಅವಧಿಯು ಮುಕ್ತಾವಾಗಿದ್ದರು ಸಹ ಸರ್ಕಾರದಿಂದ ಅನುಮೋದನೆ ಸಹ ಪಡೆದಿರುವುದಿಲ್ಲ ನವೀಕರಣ ಶುಲ್ಕ/ದಂಡವನ್ನು ಸಹ ವಸೂಲಿ ಮಾಡಲು ಕ್ರಮಕೈಗೊಂಡಿರುವುದಿಲ್ಲ. ಹಾಗೆಯೇ ಗುತ್ತಿಗೆ ಮುಗಿದಿರುವ ಪ್ರಕರಣಗಳಲ್ಲಿ ಪಾಲಿಕೆ ಸ್ವಾಧೀನ ಪಡೆಯಲು ಕ್ರಮಕೈಗೊಂಡಿರುವುದರಿಂದ ಈ ಬಗ್ಗೆ ಹೆಚ್ಚಿನ ಕ್ರಮವಹಿಸಲು ಸಮಿತಿಯು ಸೂಚಿಸಿದೆ.

ಉಪ ಅಯುಕ್ತರು(ಆಸ್ತಿಗಳು) ರವರು ಮಾತನಾಡಿ 182 ಅಸ್ತಿಗಳನ್ನು ವಾಪಸ್ಸು ಪಡೆಯಲು ನೋಟೀಸ್ ಜಾರಿ ಮಾಡಲಾಗಿದೆ, ಕೆ.ಪಿ.ಪಿ.ಆಕ್ಟ್ ಪ್ರಕಾರ ಕ್ರಮಜರುಗಿಸಲಾಗುತ್ತಿದೆ ಎಂದು ಸಮಿತಿಯ ಮಾಹಿತಿಗೆ ತಂದರು.

7. ತಾವರೆಕೆರೆ ಬಳಿ ಪ್ರಸ್ಟೇಜ್ ಸೆಂಟ್ ಜಾನ್ ವುಡ್ ಅಪಾರ್ಟ್‌ಮೆಂಟ್‌ನಲ್ಲಿ ಅದಿಕಾರಿಗಳ ಉಪಯೋಗಕ್ಕಾಗಿ 4 ವಸತಿ ಗೃಹಗಳನ್ನು ಸರ್ಕಾರದ ಅದೇಶ ಸಂಖ್ಯೆ: ನಅಇ 92 ಎಂಎನ್‌ಜಿ 2007 ದಿ:21–6–2007ರ ರೀತ್ಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರೂ:24744600–00ಗಳನ್ನು ನೀಡಿ ಖರೀದಿಸಿದ್ದು, ಈ ವಸತಿ ಗೃಹಗಳನ್ನು ಇದುವರೆವಿಗೂ ಪಾಲಿಕೆಗೆ ನೋಂದಣಿ ಮಾಡಿಕೊಂಡಿರುವುದಿಲ್ಲ, ಈ ವಸತಿ ಗೃಹವನ್ನು ಯಾರಿಗೆ ಹಂಚಿಕೆ ಮಾಡಲಾಗಿದೆ, ಎಷ್ಟು ಡೆಪಾಸಿಟ್ ಕಟ್ಟಿದ್ದಾರೆ, ಯಾರು ಯಾವ ದಿನಾಂಕದಿಂದ ಇದ್ದಾರೆ, ಇದರ ನಿರ್ವಹಣೆ ವೆಚ್ಚ ಯಾರು ಪಾವತಿಸಬೇಕು ಎಂಬ ಬಗ್ಗೆಯೂ ಸಹ ಕಚೇರಿಯಲ್ಲಿ ಸರಿಯಾದ ಮಾಹಿತಿ ಇರುವುದಿಲ್ಲ.

ಕಡತ ಪರಿಶೀಲಿಸಿದಾಗ 3 ಅಪಾರ್ಟ್‌ಮೆಂಟ್‌ಗಳು ಭರ್ತಿ ಇದ್ದು 1 ಖಾಲಿ ಇರುತ್ತದೆ, ಇದರಲ್ಲಿ ಒಬ್ಬ ಅಧಿಕಾರಿಗೆ ನಿರ್ವಹಣೆ ವೆಚ್ಚ ಪಾಲಿಕೆ ಭರಿಸಬೇಕೆಂದು ಅದೇಶ ಮಾಡಲಾಗಿದೆ, ಇದೆ ರೀತಿ ಇನ್ನೊಬ್ಬ ಅಧಿಕಾರಿಗೆ ಮಂಜೂರು ಮಾಡುವಾಗ ಸಂಬಂಧಪಟ್ಟ ಅದಿಕಾರಿಯೇ ನಿರ್ವಹಣೆ ವೆಚ್ಚ ಭರಿಸಬೇಕೆಂದು ಅದೇಶ ನೀಡಲಾಗಿದೆ., ಹಾಲಿ 2 ಅಪಾರ್ಟ್‌ಮೆಂಟ್‌ಗಳು ಖಾಲಿ ಇರುವುದಾಗಿ ಅಧಿಕಾರಿಗಳು ತಿಳಿಸಿದ್ದು, ಇನ್ನೊಂದು ಯಾವಾಗ ಖಾಲಿ ಆಗಿದೆ ಯಾವಾಗ ಭರ್ತಿ ಆಗಿತ್ತು ಎಷ್ಟು ಡೆಪಾಸಿಟ್ ಕಟ್ಟಿದ್ದಾರೆ ಎಂಬ ಬಗ್ಗೆಯೂ ಸಹ ಆಡಳಿತ ವಿಭಾಗದಿಂದ ಮಾಹಿತಿ ಇರುವುದಿಲ್ಲ

ಅದ್ದರಿಂದ ಈ ವಸತಿ ಗೃಹಗಳಲ್ಲಿ ಪಾಲಿಕೆಗೆ ಸಾಕಷ್ಟು ಆರ್ಥಿಕ ನಷ್ಟ ಉಂಟಾಗಿದ್ದು ಈ ಕುರಿತು ಸಂಬಂದಪಟ್ಟವರ ಮೇಲೆ ಕ್ರಮ ಜರುಗಿಸಲು ಹಾಗು ಹಲವಾರು ತಿಂಗಳಿಂದ ಸದರಿ ವಸತಿ ಗೃಹಗಳು ಖಾಲಿ ಇರುವುದರಿಂದ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುತ್ತಿರುವುದು ಸಮಿತಿಗೆ ಕಂಡುಬಂದಿದೆ, ಈ ಕೂಡಲೇ ಪಾಲಿಕೆಯ ಅಧಿಕಾರಿಗಳಿಗೆ ಹಂಚಿಕೆ ಮಾಡಿದಲ್ಲಿ ಪಾಲಿಕೆಗೆ ಆಗುವ ಆರ್ಥಿಕ ನಷ್ಟವನ್ನು ತಪ್ಪಸಬಹುದಾಗಿರುವುದರಿಂದ ಈ ಬಗ್ಗೆ ಕ್ರಮ ಜರುಗಿಸಲು ಸಮಿತಿಯು ಸೂಚಿಸಿದೆ.

8. ಕೋರಮಂಗಲ ಕ್ರೀಡಾಗ್ರಾಮದಲ್ಲಿ 6 ವಸತಿ ಗೃಹಗಳನ್ನು ಸುಮಾರು 9626170–00 ವೆಚ್ಚದಲ್ಲಿ (ಪ್ರತಿ ಪ್ಲಾಟ್ ವಿಸ್ತೀರ್ಣ 9626.17ಚ.ಅ) ಪಾಲಿಕೆಯ ಪಾಲಿಕೆ ಸಭೆಯ ನಿರ್ಣಯ ಸಂಖ್ಯೆ:57(91) ದಿ:20/7/2002ರ ಖರೀದಿಸಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ/226/ಎಂಎಸ್.ಜಿ/2002

ದಿ:19-9-2003ರಲ್ಲಿ ಸರ್ಕಾರವು ಅನುದಾನವಿಲ್ಲದೆ ಇರುವುದರಿಂದ ಕೆ.ಹೆಚ್.ಬಿ. ಯಿಂದ ಬರಬೇಕಾಗಿರುವ ಆಸ್ತಿ ತೆರಿಗೆ ಮೊತ್ತ (2003-4ರ ಅಂತ್ಯಕ್ಕೆ ರೂ:16397838-00 ಇದ್ದು ಈ ಮೊತ್ತದಲ್ಲಿ ರೂ:90.00ಲಕ್ಷಗಳನ್ನು ಹೊಂದಾಣಿಕೆ ಮೂಲಕ ಅನುದಾನ ಒದಗಿಸಿಕೊಳ್ಳಲು ತೀರ್ಮಾನಿಸಿ ಮಂಜೂರಾತಿ ನೀಡಿದೆ, ಅದರೆ 2002 ರಿಂದ 2008ರವರೆವಿಗೆ ಸುಮಾರು 1,02,52049-00ಗಳ ನಿರ್ವಹಣೆ ವೆಚ್ಚವನ್ನು ಈಗಾಗಲೇ ಪಾಲಿಕೆಯು ಭರಿಸಲಾಗಿದ್ದು, ಈ ಮೊತ್ತ ಯಾವ ಶೀರ್ಷಿಕೆಯಿಂದ ಬರಿಸಲಾಗಿದೆ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ.

ಈ ಪ್ಲಾಟ್ ಖರೀದಿಸಲು ನೀಡಬೇಕಾದ ಮೊತ್ತವನ್ನು ಅಸ್ತಿ ತೆರಿಗೆಯಿಂದ ಹೊಂದಾಣಿಕ ಮಾಡಿಕೊಳ್ಳಲು ಆದೇಶವಿದ್ದರು ಸಹ ಅದನ್ನು ಮೀರಿ ಸುಮಾರು96,26,120-00ಗಳನ್ನು ನೀಡಿ ಖರೀದಿಸಿದ್ದು, ಇದುವರೆವಿಗೂ ಸೇಲ್ ಡೀಡ್ ಸಹ ಮಾಡಿಕೊಳ್ಳದೇ ಯಾರಿಗೆ ಹಂಚಿಕೆ ಮಾಡಲಾಗಿದೆ ಎಂಬ ಬಗ್ಗೆಯೂ ಸಹ ಸರಿಯಾದ ದಾಖಲೆಯಗಳನ್ನು ನಿರ್ವಹಣೆ ಮಾಡಿರುವುದಿಲ್ಲ.

ಆದರೆ ಸದರಿ ಸಂಕೀರ್ಣದಲ್ಲಿ ಸಉಮಾರು 2534 ಮನೆಗಳು ಇದ್ದು ಇದರಲ್ಲಿ ಪಿ.ಡಬ್ಲೂ.ಡಿ-597 ಮನೆ, ಡಿಫೆನ್ಸ್-221 ಮನೆ ಬಿ.ಬಿ.ಎಂ.ಪಿ-6 ಮನೆಗಳು ಇದ್ದು ಇವುಗಳನ್ನು ಹೊರತುಪಡಿಸಿ ಸುಮಾರು ರೂ:26387430-00 ಗಳು ಬಾಕಿ ಇದ್ದು ಇದರಲ್ಲಿ ಸುಮಾರು 19.00ಲಕ್ಷಗಳನ್ನು ವಸೂಲಿ ಮಾಡಲಾಗಿದೆ ಇನ್ನು ಸಾಕಷ್ಟು ಬಾಕಿ ಕಂದಾಯ ಬಾಕಿ ಇರುವುದು ಕಂಡುಬಂದಿದೆ.

ಕೆ.ಹೆಚ್.ಬಿ.ಯಿಂದ ಸಾಕಷ್ಟು ಆಸ್ತಿ ತೆರಿಗೆ ಬಾಕಿ ಇದ್ದರು ಸಹ ಅದನ್ನು ಮರೆ ಮಾಡಿ ಹೊಂದಾಣಿಕೆ ಮಾಡಿಕೊಳ್ಳದೆ ಪಾಲಿಕೆಯಿಂದ ಹಣ ಪಾವತಿ ಮಾಡಿರುವುದೇ ಅಲ್ಲದೆ, ಸದರಿ ಮನೆಗಳಿಗೆ ನಿರ್ವಹಣಾ ವೆಚ್ಚವನ್ನು ಯಾರು ಪಾವತಿಸಬೇಕು, ಯಾರು ಸದರಿ ಮನೆಗಳಲ್ಲಿ ವಾಸವಿದ್ದರು, ಅವರಿಂದ ಎಷ್ಟು ನಿರ್ವಹಣಾ ವೆಚ್ಚ ವಸೂಲಿ ಮಾಡಲಾಗಿದೆ ಎಂಬ ಬಗ್ಗೆ ಯಾವುದೇ ಮಾಹಿತಿಗಳು ಸಂಬಂಧಪಟ್ಟ ಕಚೇರಿಯಲ್ಲಿ ಇಲ್ಲದಿರುವುದು ವಿಪರ್ಯಾಸ ಅದ್ದರಿಂದ ಈ ಕುರಿತು ಸ್ಪಷ್ಟ ಮಾಹಿತಿಗಳನ್ನು ಒದಗಿಸುವಂತೆ ಸಮಿತಿಯು ಸೂಚಿಸಿದೆ.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

:ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
:ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.

**ಲೆಕ್ಕಪತ್ರ ಸ್ಥಾಯಿ ಸಮಿತಿಯ ವತಿಯಿಂದ ದಿನಾಂಕ:14/1/2011ರಂದು ಮದ್ಯಾಹ್ಣ 4–30ಕ್ಕೆ ಆರೋಗ್ಯ ವೈದ್ಯಾಧಿಕಾರಿ(ಶಾಂತಿನಗರ) ಕಚೇರಿಯನ್ನು ತಪಾಸಣೆ ನಡೆಸಿದ ಬಗ್ಗೆ ವರದಿ:–**

**ಹಾಜರಿದ್ದ ಸದಸ್ಯರುಗಳು:–**

| | |
|---|---|
| ಶ್ರೀ.ಗಂಗಭೈರಯ್ಯ | ಅಧ್ಯಕ್ಷರು |
| ಶ್ರೀ.ಓ.ಮಂಜುನಾಥ್, | ಸದಸ್ಯರು |
| ಶ್ರೀಮತಿ. ಕ್ವೀನ್ ಎಲಿಜಬತ್ | ಸದಸ್ಯರು |
| ಶ್ರೀ.ಸಂಪತ್ ರಾಜ್.ಆರ್. | ಸದಸ್ಯರು |

ಲೆಕ್ಕಪತ್ರ ಸ್ಥಾಯಿ ಸಮಿತಿಯ ವತಿಯಿಂದ ದಿನಾಂಕ:14/1/2011 **ಆರೋಗ್ಯ ವೈದ್ಯಾಧಿಕಾರಿ (ಶಾಂತಿನಗರ)** ಕಚೇರಿಯ ಅಧೀನದ ಆಸ್ಟಿನ್ ಟೌನ್ ಜನನ ಮತ್ತು ಮರಣ ಕೇಂದ್ರ ಕಚೇರಿಯನ್ನು ತಪಾಸಣೆ ಮಾಡಿದ ಸಮಯದಲ್ಲಿ ಲೆಕ್ಕಪತ್ರಗಳನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲದಿರುವುದು ಮತ್ತು ಸಾಕಷ್ಟು ದೋಷಗಳಿರುವುದು ಕಂಡುಬಂದಿದೆ.

1. ಆರೋಗ್ಯ ವೈಧ್ಯಾದಿಕಾರಿ(ಆಸ್ಟಿನ್ ಟೌನ್) ಕಛೇರಿಯಲ್ಲಿ ನಿಯಮಾನುಸಾರ ನಿರ್ವಹಣೆ ಮಾಡಬೇಕಾಗಿದ್ದ ನಗದು ಪುಸ್ತಕವನ್ನು ನಿರ್ವಹಿಸಿಲ್ಲದಿರುವುದು ಕಂಡುಬಂದಿದ್ದು, ಸದರಿ ಕಚೇರಿಯಲ್ಲಿ ನಗದು ಪುಸ್ತಕ, ಖಿರ್ಧಿ ಪುಸ್ತಕ ಬ್ಯಾಂಕ್ ರೆಮಿಟೆನ್ಸ್ ಈ ಮೂರು ವಹಿಗಳು ಒಂದೇ ಅಗಿರುವುದು ಕಂಡುಬಂದಿದ್ದು, ಸಿಬ್ಬಂದಿಗಳು ಸಹ ಅದೇ ಮಾಹಿತಿಯನ್ನು ಒದಗಿಸಿರುತ್ತಾರೆ, ಈ ಬಗ್ಗೆ ಕಚೇರಿಗಳಲ್ಲಿ ನಿರ್ವಹಣೆ ಮಾಡಬೇಕಾದಂತಹ ವಹಿಗಳನ್ನು ನಿರ್ವಹಸಿಲು ಸೂಚಿಸಿದ್ದರು ಸಹ ಬೇಜವಾಬ್ದಾರಿತನ ತೋರಿರುವುದೇ ಅಲ್ಲದೆ ಜನನ ಮತ್ತು ಮರಣ ಪತ್ರ ನೀಡುವಿಕೆಯಿಂದ ಬರುವ ಹಣವನ್ನು ಸಬ್ ರಿಜಿಸ್ಟ್ರಾರ್ ಹುದ್ದೆಯ ನೌಕರರು ನಿರ್ವಹಿಸಬೇಕಾಗಿದ್ದು, ಈ ಹುದ್ದೆಯಲ್ಲಿ ಸಿಬ್ಬಂದ್ದಿ ಇದ್ದರು ಸಹ ಶ್ರೀ.ರಫೀಕ್ ಅಹಮದ್, ಸೈನೋ ಗ್ಯಾಸ್ ಗ್ಯಾಂಗ್‌ಮನ್ ಒಬ್ಬನಿಂದ ದಿನನಿತ್ಯ ಸಾರ್ವಜನಿಕರಿಂದ ಜನನ ಮತ್ತು ಮರಣ ಪ್ರಮಾಣ ಪತ್ರದ ಹಣವನ್ನು ವಸೂಲಿ ಮಾಡಿಸಿ ಬ್ಯಾಂಕ್‌ಗೆ ಜಮಾ ಮಾಡಲಾಗುತ್ತಿದೆ.

2. ಪ್ರತಿ ನಿತ್ಯ ವಸೂಲಿಯಾಗುವ ಹಣದ ವಿವರಣೆಯ ಪುಸ್ತಕವನ್ನು ಪರಿಶೀಲಿಸಲಾಗಿ 1–1–10 ರಿಂದ 31/12/10ರವರೆಗಿನ ಒಂದು ವರ್ಷದಲ್ಲಿ ಗಣಕ ಯಂತ್ರದ ಮೂಲಕ ಸುಮಾರು 3,13400–00 ಗಳಷ್ಟು ಹಣವನ್ನು ಬ್ಯಾಂಕ್‌ಗೆ ಜಮಾ ಮಾಡಲಾಗಿದ್ದು, ಇನ್ನು ಸುಮಾರು 1,14,020–00ಗಳನ್ನು ಇದುವರೆವಿಗೂ ಬ್ಯಾಂಕ್‌ಗೆ ಜಮಾ ಮಾಡದೆ ಹಣ ದುರುಪಯೋಗ ಮಾಡಿಕೊಂಡಿರುವುದು ಸಮಿತಿಯ ತಪಾಸಣೆಯಲ್ಲಿ ಕಂಡುಬಂದಿದೆ.
3. ಇದಲ್ಲದೆ ಕಚೇರಿಯ ರಸೀದಿ ಪುಸ್ತಕ ಸಂಖ್ಯೆ:17433 ರಿಂದ 17437ರವರೆಗಿನ 5 ಪುಸ್ತಕಗಳಿಗೆ ರಸೀದಿ ಸಂಖ್ಯೆ:871601 ರಿಂದ 871850ಕ್ಕೆ ದಿನಾಂಕ:23/12/09ರಿಂದ 16/1/10ರವರೆಗೆ ವಿವಿದ ದಿನಾಂಕಗಳಲ್ಲಿ

ರೂ:18680–00 ಗಳನ್ನು ಕೈಬರಹದಲ್ಲಿ ರಸೀದಿ ಬರೆದಿದ್ದು, ಸದರಿ ಮತ್ತವನ್ನು ದಿನಾಂಕ:9–11–2010ರಂದು ಪಾಲಿಕೆ ಖಜಾನೆಗೆ ಜಮಾ ಮಾಡಿರುವುದು ಕಂಡುಬರುತ್ತಿದೆ.

4. ಇದೇ ರೀತಿ ರಸೀದಿ ಪುಸ್ತಕದ ಸಂಖ್ಯೆ:17438 ರಿಂದ 17443ರವರೆಗಿನ 5 ಪುಸ್ತಕಗಳಿಗೆ 16/1/10 ರಿಂದ 6/2/10ರ ವರೆವಿಗೆ ರೂ:18990–00ಗಳನ್ನು ಕೈಬರಹದಲ್ಲಿ ರಸೀದಿ ಹಾಕಿದ್ದು ಸದರಿ ಮೊತ್ತವನ್ನು ಸುಮಾರು 10 ತಿಂಗಳ ನಂತರ ದಿನಾಂಕ:23/12/2010ರಂದು ಪಾಲಿಕೆ ಖಜಾನೆಗೆ ಜಮಾ ಮಾಡಿ ಹಣ ದುರುಪಯೋಗ ಮಾಡಿಕೊಂಡಿರುವುದು ಕಂಡುಬಂದಿದೆ. ಸದರಿ ಮೊತ್ತಗಳನ್ನು ಹೊಸದಾಗಿ ಸಬ್ ರಿಜಿಸ್ಟ್ರಾರ್ ಆದ ಶ್ರೀ.ಇಂದಿರಾ ಬಹುದ್ದೂರ್ ರವರು ಚಾರ್ಜ ತೆಗೆದುಕೊಳ್ಳುವಾಗ ಸೂಚಿಸಿದ ಮೇರೆಗೆ ಹಣ ಪಾವತಿ ಮಾಡಿರುವುದಾಗಿ ತಪಾಸಣೆ ಸಮಯದಲ್ಲಿ ಸಿಬ್ಬಂದಿಗಳು ಮಾಹಿತಿ ಒದಗಿಸಿರುತ್ತಾರೆ.

5. ಖರ್ಥಿ ಪುಸ್ತಕವನ್ನು ಪರಿಶೀಲಿಸದಾಗ ಈ ಕೆಳಕಂಡಂತೆ ಪಾಲಿಕೆ ಖಜಾನೆಗೆ ಜಮಾ ಮಾಡಿರುವುದು ಕಂಡುಬರುತ್ತಿದೆ.1)ದಿನಾಂಕ:9/9/10 ರೂ:11460–00, 14/9/10 ರೂ:9130–00, 28/9/10 ರೂ:14360–00, 27/10/10 ರೂ:23688–00 ಮತ್ತೆ ದಿನಾಂಕ:23/9/10 ರಂದು ರೂ:8390–00 ಮಾಡಲಾಗಿದೆ. ದಿನಾಂಕ: 1–9–10 ರಂದು ರೆಮಿಟೆನ್ಸ್

6. ದಿನಾಂಕ:6–9–10ರಂದು ಒಂದೇ ದಿನ ಸುಮಾರು 170 ಎಂಟ್ರಿಗಳನ್ನು ಮಾಡಿ ದಿನಾಂಕ:17/10/10ರಂದುರೂ:13705–00 ಗಳನ್ನು ಬ್ಯಾಂಕ್‌ಗೆ ಜಮಾ ಮಾಡಲಾಗಿದೆ. ತದನಂತರ 12–9–08 ಎಂದು ತೋರಿಸಿ ರಸೀದಿ ಸಂಖ್ಯೆ:331001 ರಿಂದ 331050 ರ ಒಟ್ಟು ಮೊತ್ತ 5300–00ಗಳನ್ನು ದಿನಾಂಕ:4/11/8ರಂದು ಜಮಾ ಮಾಡಲಾಗಿದೆ. ಇದೇ ರೀತಿ ಸಾಕಷ್ಟು ಕಡೆ ಪಾಲಿಕೆ ಖಜಾನೆಗೆ ಜಮಾ ಮಾಡಿರುವ ಚಲನ್‌ಗಳು ಲಭ್ಯವಿದ್ದು ಕಚೇರಿಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಗಳು ಪಾಲಿಕೆ ಹಣ ದುರುಪಯೋಗ ಮಾಡಿಕೊಮಡು ತಮಗಿಷ್ಟ ಬಂದಾಗ ಜಮಾ ಮಾಡಿರುವುದು ಕಂಡುಬರುತ್ತಿದೆ, 2008ರಿಂದ ಇದುವರೆಗೆ ಖರ್ಥಿ ಪುಸ್ತಕದಲ್ಲಿ ಪಾಲಿಕೆಗೆ ಜಮಾ ಮಾಡಿರುವವರ ಸಹಿ ಇರುವುದಿಲ್ಲ ಇದರ ಮೇಲು ಉಸ್ತುವಾರಿ ಹೊತ್ತಿರುವ ಅಧಿಕಾರಿಗಳು ಸಹ ಧೃಡೀಕರಿಸಿರುವುದಿಲ್ಲದಿರುವುದು ಸಮಿತಿಗೆ ಕಂಡುಬಂದಿದೆ.

7. ಖರ್ಥಿ ಪುಸ್ತಕವನ್ನು ಹೊಸದಾಗಿ ತೆರೆಯುವಾಗ ಯಾವ ಅಧಿಕಾರಿಯು ಸಹ ಸಹಿ ಮಾಡಿರುವುದಿಲ್ಲ, ತದನಂತರ ವೀಕ್ಲಿ ಸ್ಟೇಟ್‌ಮೆಂಟ್ ಮತ್ತು ಮಾಸಿಕ ಸ್ಟೇಟ್‌ಮೆಂಟ್ ಅನ್ನು ಬರೆದಿದ್ದು ಸದರಿ ಲೆಕ್ಕ ಸರಿ ಇದೆಯೇ ಎಂಬ ಬಗ್ಗೆಯೂ ಸಹ ಯಾವು ದೃಡೀಕರಿಸಿಲ್ಲದಿರುವುದು ಕಂಡುಬಂದಿದ್ದು, ಒಟ್ಟಿನಲ್ಲಿ ಸದರಿ ಕಚೇರಿಯಲ್ಲಿ ಅಧಿಕಾರಿ ಸಿಬ್ಬಂದಿಗಳು ನಿಯಮಾವಳಿ ರೀತ್ಯ ಕರ್ತವ್ಯ ನಿರ್ವಹಿಸುತ್ತಿಲ್ಲದಿರುವುದು ಎದ್ದು ಕಾಣುತ್ತಿದೆ.

8. ಸದರಿ ಕಚೇರಿಯಲ್ಲಿ ಹಣಕಾಸಿನ ನಿರ್ವಹಣೆಯನ್ನು ಗಮನಿಸಬೇಕಾಗಿದ್ದ ಆರೋಗ್ಯ ವೈದ್ಯಾಧಿಕಾರಿಗಳ ನಿರ್ಲಕ್ಷ್ಯತನದಿಂದ ಈ ರೀತಿ ಅಗಿರುವುದು ಮೇಲು ನೋಟಕ್ಕೆ ಕಂಡುಬಂದಿದೆ, ಹಾಗು ದಿನನಿತ್ಯ ಪರಿಶೀಲನೆ ನಡೆಸಿ ವಹಿಗಳಲ್ಲಿ ಸಹಿ ಮಾಡಬೇಕಾಗಿದ್ದ ಅಧಿಕಾರಿಗಳು ಸಹಿಯನ್ನೇ ಮಾಡದೇ ಇರುವುದು ಸಹ ಕಂಡುಬಂದಿದೆ.

9. ಬಿ.ಬಿ.ಎಂ.ಪಿ. ಆದ ನಂತರ ದೊಮ್ಮಲೂರು ಪ್ರದೇಶವು ಆಸ್ಟಿನ್ ಟೌನ್ ಕಚೇರಿ ವ್ಯಾಪ್ತಿಗೆ ಬರುತ್ತಿದ್ದರು ಸಹ ದೊಮ್ಮಲೂರು ಪ್ರದೇಶದ ಕಚೇರಿಯಲ್ಲಿಯೇ ಜನನ ಮತ್ತು ಮರಣ ಪ್ರಮಾಣ ಪತ್ರಗಳಿಗೆ ಸಾರ್ವಜನಿಕರಿಂದ ಹಣವನ್ನು ವಸೂಲಿ ಮಾಡುತ್ತಿರುವುದು ಕಂಡುಬಂದಿದ್ದು ಸಾರ್ವಜನಿಕರು ಹಣ ದೊಮ್ಮಲೂರು ಕಚೇರಿಯಲ್ಲಿ ನೀಡಿ ರಸೀದಿ ಪಡೆದು ಜನನ ಮತ್ತು ಮರಣ ಪತ್ರಗಳಿಗೆ ಈ ಕಚೇರಿಗೆ ಬರುತ್ತಿರುವುದು ಕಂಡುಬಂದಿದು, ಸದರಿ ಹಣವನ್ನು 2–3ದಿನಗಳ ನಂತರ ಅಲ್ಲಿಂದ ಪಡೆದು ಪಾಲಿಕೆ ಖಜಾನೆಗೆ ಜಮಾ ಮಾಡಲಾಗುತ್ತಿದೆ ಈ ರೀತಿಯ ಕಾರ್ಯದಿಂದ ಲೆಕ್ಕಪತ್ರಗಳ ನಿರ್ವಹಣೆ ಸರಿಯಾಗಿ ಇಟ್ಟಿಲ್ಲದಿರುವುದು ಕಂಡುಬಂದಿದೆ. ಹಾಗು ಡಾ:ಯತಿರಾಜ್ ರವರು ಸದರಿ ಕಚೇರಿಯ ಪಾಸ್‌ವರ್ಡ್ ಉಪಯೋಗಿಸಿಕೊಂಡು ಎರಡು ಕಚೇರಿಯಲ್ಲಿ ರಸೀದಿ ಹಾಕುತ್ತಿದ್ದು ಹಣವನ್ನು ತಮಗಿಷ್ಟ ಬಂದಾಗ ಕಳುಹಿಸಿಕೊಡುತ್ತಿದ್ದಾರೆಂದು ಸಿಬ್ಬಂದಿಗಳು ಸಮಿತಿಗೆ ತಿಳಿಸಿರುತ್ತಾರೆ.

10. ಈ ಕಚೇರಿ ವ್ಯಾಪ್ತಿಗೆ ಬರುವ ಆಸ್ಪತ್ರೆಗಳಿಂದ/ ಸ್ಮಶಾನದಿಂದ ಜನನ ಮತ್ತು ಮರಣದ ವಿವರಗಳ ನಮೂನೆಯ ನಿರ್ವಹಣೆಯನ್ನು ಶಾಶ್ವತವಾಗಿ ನಿರ್ವಹಣೆ ಮಾಡಬೇಕಾಗಿದ್ದರು ಸಹ ಸರಿಯಾಗಿ ಇಟ್ಟಿಲ್ಲದೇ ಇರುವುದು ಮತ್ತು ನಮೂನೆಯನ್ನು ಭರ್ತಿ ಮಾಡಿ ಸಂಬಂಧಪಟ್ಟ ಅಧಿಕಾರಿಗಳು ದೃಡೀಕರಿಸದೇ ಇರುವದು ತಪಾಸಣೆಯಲ್ಲಿ ಕಂಡುಬಂದಿದೆ.

11. ಡಾ:ಸಿದ್ದಪ್ಪಾಜಿ, ಆರೋಗ್ಯ ವೈದ್ಯಾಧಿಕಾರಿ ರವರು ಈ ಕಚೇರಿಯಲ್ಲಿ ವರ್ಗಾವಣೆಯಾಗಿ ಬಂದಿದ್ದ ಸಬ್ ರಿಜಿಸ್ಟ್ರಾರ್ / ಜನನ ಮರಣ ನೋಂದಣಿಗಾರನನ್ನು ಮೂಲೆಗೊತ್ತಿ ಯಾವುದೇ ಹಣಕಾಸಿನ ಕಾರ್ಯನಿರ್ವಹಣೆ ಮಾಡಲು ಬಿಡದೆ ಇರುವುದು ಹಾಗು 4ನೇ ದರ್ಜೆ ನೌಕರರಿಂದ ಹಣಕಾಸಿನ ನಿರ್ವಹಣೆ ಮತ್ತು ಕೆಲಸಕಾರ್ಯಗಳನ್ನು ನಿರ್ವಹಿಸಿಕೊಂಡಿರುವುದು ನಿಯಮಾವಳಿಗೆ ವಿರುದ್ದವಾಗಿರುತ್ತದೆ. ಈ ರೀತಿ ಕಚೇರಿಯ ಹಣಕಾಸಿನ ನಿರ್ವಹಣೆ ಮಾಡಿರುವುದು ಸಮಿತಿಗೆ ಅನುಮಾನಸ್ಪದವಾಗಿ ಕಂಡುಬಂದಿರುವುದರಿಂದ ಈ ಬಗ್ಗೆ ಕೂಡಲೇ ತನಿಖೆ ನಡೆಸಿ ಕ್ರಮಕೈಗೊಳ್ಳಲು ಸೂಚಿಸಿದೆ.

12. ಈ ಕಚೇರಿಯಲ್ಲಿ ಎಷ್ಟೆಲ್ಲ ದುರುಪಯೋಗವಾಗಿರುವುದನ್ನು ಸಮಿತಿಯು ಪತ್ತೆ ಹಚ್ಚಲಾಗಿ ಸಂಬಂದಪಟ್ಟ ಆರೋಗ್ಯ ವೈದ್ಯಾಧಿಕಾರಿಗಳಾದ ಡಾ.ಸಿದ್ದಪ್ಪಾಜಿ ರವರನ್ನು ತಕ್ಷಣ ದೂರವಾಣಿ ಮುಖಾಂತರ ಸಂಪರ್ಕಿಸಲು ಪ್ರಯತ್ನಿಸಲಾಗಿದ್ದು, ಸಂಪರ್ಕಕ್ಕೆ ಸಿಗದೇ ಇದ್ದಾಗ ವೈರ್ ಲೆಸ್ ಹಾಗು ಆರೋಗ್ಯಾಧಿಕಾರಿ(ಪೂರ್ವ)ರವರ ಮುಖಾಂತರ ಸಂಪರ್ಕಿಸಲು ಪ್ರಯತ್ನಿಸಲಾಯಿತು. ಈ ಬಗ್ಗೆ ಆಯುಕ್ತರ ಗಮನಕ್ಕೆ ತರಲಾಗಿ ಆಯುಕ್ತರು ತಕ್ಷಣ ಸದರಿ ಅಧಿಕಾರಿಯನ್ನು ತಪಾಸಣೆಗೆ ಹಾಜರಾಗಿ ಸೂಕ್ತ ವಿವರಣೆಯನ್ನು ನೀಡಲು ಸೂಚಿಸಿರುವುದಾಗಿ ಅದ್ಯಕ್ಷರಿಗೆ ತಿಳಿಸಿರುತ್ತಾರೆ. ಆದರು ಸಹ ಸಮಿತಿಯ ಸದಸ್ಯರೆಲ್ಲರು ಸುಮಾರು 3ಗಂಟೆಗಳಿಗೂ ಹೆಚ್ಚು ಕಾಲ ಕಚೇರಿಯಲ್ಲಿ ಇದ್ದರು ಸಹ ಸದರಿ ವೈದ್ಯಾಧಿಕಾರಿಗಳು ಕಚೇರಿಗೆ ಹಾಜರಾಗದೆ ಸಮಿತಿಗೆ ಅಗೌರವ ತೋರಿರುತ್ತಾರೆ.

ಇಷ್ಟೊಂದು ಅವ್ಯವಹಾರ ಹಾಗು ಕಚೇರಿ ನಿರ್ವಹಣೆಯಲ್ಲಿ ಅಸಡ್ಡೆ ತೋರಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ಕ್ರಮಕೈಗೊಳ್ಳಲು ಸಮಿತಿಯ ಸೂಚಿಸಿದೆ.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

:ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
:ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.
:ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕೆ ಕಳುಹಿಸಿದೆ.